**ಕರ್ನಾಟಕ ಸರ್ಕಾರ**

ಸಂ:ಸಕನಿ:ಸಿಬ್ಬಂದಿ-11/ಸಿಆರ್-41/2020-21

ಸಮಾಜ ಕಲ್ಯಾಣ ಆಯುಕ್ತರ ಕಛೇರಿ
5ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 16 -09-2021

**ಅಧಿಕೃತ ಜ್ಞಾಪನ**

ವಿಷಯ:- ಸಮಾಜ ಕಲ್ಯಾಣ ಇಲಾಖೆಯ ಗ್ರೂಪ್-ಡಿ ವೃಂದದ ಜವಾನರ ಹುದ್ದೆಯ ಉಳಿಕೆ ಮೂಲ ವೃಂದ ಹಾಗೂ ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:01-01-2021 ರಲ್ಲಿದ್ದಂತೆ ಪ್ರಕಟಿಸುವ ಕುರಿತು.

ಉಲ್ಲೇಖ:-1. ಕರ್ನಾಟಕ ಸರ್ಕಾರಿ ನೌಕರರ (ಜೇಷ್ಟತೆ) ನಿಯಮಗಳು 1957
2. ಸರ್ಕಾರದ ಅಧಿಕೃತ ಜ್ಞಾಪನ ಸಂ: ಸಿಆಸುಇ 07 ಸೇನೆನಿ 96 ದಿ: 16-07-96
3. ಸರ್ಕಾರದ ಅಧಿಕೃತ ಜ್ಞಾಪನ ಸಂ: ಸಿಆಸುಇ 32 ಸೇನೆನಿ 03 ದಿ: 10-06-03
4. ಸರ್ಕಾರದ ಅಧಿಸೂಚನೆ ಸಂ: ಡಿಪಿಎಆರ್ 06 ಪಿಎಲ್ ಎಕ್ಸ ದಿ: 06-11-2013
5. ಸರ್ಕಾರದ ಅಧಿಸೂಚನೆ-1 ಸಂ: ಡಿಪಿಎಆರ್ 43 ಹೆಚ್.ಕೆ.ಸಿ 2013 ದಿನಾಂಕ: 29-01-2014
6. ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 1985 ಹಾಗೂ 2014
7. ಈ ಕಛೇರಿಯ ಪತ್ರ ಸಂಖ್ಯೆ:ಸಕನಿ/ಸಿಬ್ಬಂದಿ-11/ಸಿಆರ್-41/2020-21, ದಿನಾಂಕ:30/01/2021

---------

ಕರ್ನಾಟಕ ಸರ್ಕಾರಿ ನೌಕರರ (ಜೇಷ್ಟತೆ) ನಿಯಮ 1957 ರ ನಿಯಮ 10 ರನ್ವಯ ಪ್ರತಿ ವರ್ಷ ಪ್ರತಿ ವೃಂದದ ಜೇಷ್ಟತಾ ಪಟ್ಟಿಗಳನ್ನು ಪ್ರಕಟಿಸಬೇಕಾಗಿರುತ್ತದೆ. ಉಲ್ಲೇಖ (2) ಮತ್ತು (3) ರ ಸರ್ಕಾರದ ಅಧಿಕೃತ ಜ್ಞಾಪನಗಳನ್ವಯ ದಿ: 01-01-2021 ರಲ್ಲಿದ್ದಂತೆ ಗ್ರೂಪ್-ಡಿ ವೃಂದದ ಜವಾನರ ಹುದ್ದೆಯ ಜೇಷ್ಟತಾ ಪಟ್ಟಿಯನ್ನು ಪ್ರಕಟಿಸಬೇಕಾಗಿರುತ್ತದೆ.

ಉಲ್ಲೇಖ (4) ಮತ್ತು (5) ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅಧಿಸೂಚನೆಗಳನ್ವಯ ಹೈದ್ರಾಬಾದ್-ಕರ್ನಾಟಕ ಪ್ರದೇಶ ಸ್ಥಳೀಯ ವೃಂದ ಮತ್ತು ಉಳಿಕೆ ಮೂಲ ವೃಂದದ ಜೇಷ್ಟತಾ ಪಟ್ಟಿಗಳನ್ನು ಪ್ರತಿ ವೃಂದಗಳಲ್ಲಿ ನಿರ್ವಹಿಸಬೇಕಾಗಿರುತ್ತದೆ. ಉಲ್ಲೇಖ (7) ರ ಈ ಕಛೇರಿ ಪತ್ರದನ್ವಯ ಜಿಲ್ಲೆಗಳಿಂದ ಸ್ವೀಕೃತಗೊಂಡ ಮಾಹಿತಿ ಆಧಾರದ ಮೇಲೆ ಗ್ರೂಪ್-ಡಿ ವೃಂದದ ಜವಾನರ ಹುದ್ದೆಯ ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದದ ತಾತ್ಕಾಲಿಕ ಜೇಷ್ಟತೆಯನ್ನು ನಮೂನೆ-1 ರಲ್ಲಿ, ಉಳಿಕೆ ಮೂಲ ವೃಂದದ ತಾತ್ಕಾಲಿಕ ಜೇಷ್ಟತೆಯನ್ನು ನಮೂನೆ-2 ರಲ್ಲಿ ದಿ:01-01-2021 ರಲ್ಲಿದ್ದಂತೆ ತಾತ್ಕಾಲಿಕ ಜೇಷ್ಟತಾ ಪಟ್ಟಿಯನ್ನು ಇಲಾಖಾ ವೆಬ್ ಸೈಟ್ sw.kar.nic.in ನಲ್ಲಿ ಪ್ರಕಟಿಸಲಾಗಿರುತ್ತದೆ.

ಸದರಿ ಜೇಷ್ಠತಾ ಪಟ್ಟಿಯನ್ನು ವೆಬ್ ಸೈಟ್ ಮೂಲಕ ಡೌನ್ ಲೋಡ್ ಮಾಡಿಕೊಂಡು ಸಂಬಂಧಿಸಿದ ಎಲ್ಲಾ ನೌಕರರಿಗೂ ಜಾರಿ ಮಾಡಿ ಜೇಷ್ಠತೆಯಿಂದ ಬಾಧಿತರಾದ ನೌಕರರಿಂದ ಹಾಗೂ ಪ್ರಕಟಿಸಿದ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ನೌಕರರ ಹೆಸರು, ಜಾತಿ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ಜೇಷ್ಠತೆಗೆ ಅರ್ಹತೆ ಹೊಂದಿದ ದಿನಾಂಕ, ಹಾಗೂ ಜೇಷ್ಠತೆ ಕ್ರಮಾಂಕ ನಿಗಧಿಯಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಪರಿಶೀಲಿಸಿ ಸಂಬಂಧಿಸಿದ ಅಧಿಕಾರಿಗಳು ನ್ಯೂನತೆಗಳನ್ನು ಸರಿಪಡಿಸಲು ಸೂಕ್ತ ದಾಖಲಾತಿಗಳೊಂದಿಗೆ ಆಕ್ಷೇಪಣೆ ಪಡೆದು ಎಲ್ಲಾ ಆಕ್ಷೇಪಣೆಗಳನ್ನು ಕ್ರೋಡೀಕರಿಸಿ ದೃಢೀಕರಣದೊಂದಿಗೆ ದಿ: 1-10-2021 -ರೊಳಗೆ ಈ ಕಛೇರಿಯ ಇ-ಮೇಲ್ ವಿಳಾಸ ddadmn.swd@gmail.com ಗೆ ಕಳುಹಿಸತಕ್ಕದ್ದು. ಹಾಗೂ ಪ್ರಕಟಿತ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ನೌಕರರ ಸೇವಾ ವಿವರಗಳು ಮೇಲಿನ ಮಾನದಂಡದನ್ವಯ ನಿಯಮಾನುಸಾರ ಕ್ರಮಬದ್ಧವಾಗಿರುವುದನ್ನು ನೌಕರರು ಕಾರ್ಯನಿರ್ವಹಿಸುತ್ತಿರುವ ಕಛೇರಿಯ ಮುಖ್ಯಸ್ಥರು ನೌಕರರ ಸೇವಾ ಪುಸ್ತಕದೊಂದಿಗೆ ತಾಳೆ ಮಾಡಿ ಖಚಿತಪಡಿಸಿಕೊಂಡು ಮಾಹಿತಿಯು ನೈಜವಾಗಿರುವ ಬಗ್ಗೆ ಪ್ರತ್ಯೇಕವಾಗಿ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.

ನಿಗಧಿತ ದಿನಾಂಕದ ನಂತರ ಸ್ವೀಕೃತಗೊಳ್ಳುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಒಮ್ಮೆ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿದ ನಂತರ ನೌಕರರ ಹೆಸರು ಬಿಟ್ಟು ಹೋಗಿರುವುದು ಹಾಗೂ ಜೇಷ್ಠತೆಗೆ ಸಂಬಂಧಿಸಿದ ಇತರೆ ನ್ಯೂನತೆಗಳು ಕಂಡುಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನೇ ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು.

16/9

ಆಯುಕ್ತರು,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

ಪ್ರತಿಯನ್ನು:-

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
2. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು
3. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ
4. ಎಲ್ಲಾ ಜಿಲ್ಲೆಗಳ ಜಂಟಿ ನಿರ್ದೇಶಕರು/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ,
5. ಎಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ
6. ಎಲ್ಲಾ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ
7. ಎಲ್ಲಾ ತಾಲ್ಲೂಕುಗಳ ಸಹಾಯಕ ನಿರ್ದೇಶಕರು ಗ್ರೇಡ್-1 ಮತ್ತು ಗ್ರೇಡ್-2 ಸಮಾಜ ಕಲ್ಯಾಣ ಇಲಾಖೆ,
8. ಸಂಬಂಧಿಸಿದ ನೌಕರರಿಗೆ ಸಂಬಂಧಿಸಿದ ಅಧಿಕಾರಿಗಳ ಮುಖಾಂತರ.

## ನಮೂನೆ-1

### ದಿನಾಂಕ:01/01/2021 ರಲ್ಲಿದ್ದಂತೆ ಸಮಾಜ ಕಲ್ಯಾಣ ಇಲಾಖೆಯ ಗ್ರೂಪ್-ಡಿ ವೃಂದದ ಜವಾನರ ಹುದ್ದೆಯ ನೌಕರರ ತಾತ್ಕಾಲಿಕ ಜೇಷ್ಠತಾ ಪಟ್ಟಿ (ಹೈದ್ರಾಬಾದ-ಕರ್ನಾಟಕ ಸ್ಥಳೀಯ ವೃಂದ)

ಸಂಖ್ಯೆ:ಸಕನಿ/ಸಿಬ್ಬಂದಿ-11/ಸಿಆರ್-41/2020-21, ದಿನಾಂಕ: 16/09/2021

| ಕ್ರ.ಸಂ | ನೌಕರರ ಹೆಸರು | ದಿ:01-01-2021ರಲ್ಲಿದ್ದಂತೆ ನೌಕರರು ಕಾರ್ಯನಿರ್ವಹಿಸುತ್ತಿರುವ ಸ್ಥಳ | ಜಾತಿ | ನೇರ ನೇಮಕಾತಿ/ ಮುಂಬಡ್ತಿ | ಜನ್ಮ ದಿನಾಂಕ | ನೇಮಕಾತಿ ಅದೇಶ ದಿನಾಂಕ | ಸೇವೆಗೆ ಸೇರಿದ ದಿನಾಂಕ | ನೈಜವಾಗಿ ಜೇಷ್ಠತೆಗೆ ಅರ್ಹತೆ ಹೊಂದಿದ ದಿನಾಂಕ | ಷರಾ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 1 | ಅಬ್ದುಲ್ ಕರೀಂ | ಸಹಾಯಕ ನಿರ್ದೇಶಕರ ಕಛೇರಿ, ಸ.ಕ.ಇ, ಮಾನ್ವಿ ತಾಲ್ಲೂಕು. | ಮುಸ್ಲೀಂ | ದಿನಗೂಲಿ ಸಕ್ರಮಾತಿ | 01-08-1961 | 01-01-1990 | 01-01-1990 | 01-01-1990 | ದಿನಾಂಕ:31/07/2021 ರಲ್ಲಿ ವಯೋನಿವೃತ್ತಿ |
| 2 | ವೆಂಕಟೇಶ ಎಸ್ ಪೂಜಾರ | ಸ.ನಿ, ಕಛೇರಿ ಸ.ಕ.ಇ ಕೊಪ್ಪಳ | ಪ.ಜಾತಿ | ಅ.ನೇ | 15-12-1972 | 25-04-2000 | 18-05-2000 | 25-04-2000 | - |
| 3 | ಪೀರಪಾಷ | ಸ.ನಿ ಕಛೇರಿ, ಸ.ಕ.ಇ ಲಿಂಗಸುಗೂರು | ಮುಸ್ಲಿಂ | ದಿನಗೂಲಿ ಸಕ್ರಮಾತಿ | 05-05-1962 | 23-05-2002 | 23-05-2002 | 23-05-2002 | - |
| 4 | ಆರ್ ಜಮದಗ್ನಿ | ಉ.ನಿ ಕಛೇರಿ, ಸ.ಕ.ಇ, ಕೊಪ್ಪಳ | ಪ.ಜಾತಿ | ಅ.ನೇ | 01-06-1975 | 11-03-2003 | 27-03-2003 | 11-03-2003 | - |
| 5 | ಪ್ರಭು | ಸ.ನಿ ಕಛೇರಿ, ಸ.ಕ.ಇ, ಕಲಬುರಗಿ | ಪ್ರವರ್ಗ-1 | ನೇರ ನೇಮಕಾತಿ | 05-05-1972 | 21-10-2004 | 26-10-2004 | 21-10-2004 | - |
| 6 | ರಾಜರತ್ನ ತಂದೆ ಸಾಯಿಬಣ್ಣ ದೊಡಮನಿ | ಜ.ನಿ ಕಛೇರಿ, ಸ.ಕ.ಇ, ಕಲಬುರಗಿ | ಪ.ಜಾತಿ | ನೇರ ನೇಮಕಾತಿ | 01-07-1979 | 21-10-2004 | 18-11-2004 | 21-10-2004 | - |
| 7 | ಆಕೇಶ | ಸ.ನಿ ಕಛೇರಿ, ಸ.ಕ.ಇ, ಔರಾದ(ಬಿ) | ಪ.ಜಾತಿ | ಅ.ನೇ | 01-02-1980 | 21-08-2007 | 27-08-2007 | 21-08-2007 | - |